ಕರ್ನಾಟಕ ಸರ್ಕಾರ Conversion order Original

ನಂ: ಎಎಲ್.ಎನ್(ಎಸ್.ಉ)ಎಸ್.ಆರ್.136/2010-11

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 31/03/2011.

-: **ಅಧಿಕೃತ ಜ್ಞಾಪನ** :-

ವಿಷಯ: - ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, **ಕೊತ್ತನೂರು ಗ್ರಾಮದ ಸರ್ವೆ ನಂ. 81/2ಡಿ ರಲ್ಲಿ 4-03 ಎ/ಗುಂಟೆ** ವಿಸ್ತೀರ್ಣವನ್ನು ವ್ಯವಸಾಯೇತರ **ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ **ಸೊಸೈಟಿ ಆಫ್ ದಿ ಸರ್ವೆಂಟ್ ಆಫ್ ದಿ ಹೋಲಿ ಸ್ಪಿರಿಟ್ಸ್, ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.** ರವರು ಸಲ್ಲಿಸಿರುವ ಅರ್ಜಿಯ ದಿನಾಂಕ: 22/11/2010.

ಉಲ್ಲೇಖ:-
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 7 ಎಲ್‌ಜಿಪಿ 95 ದಿನಾಂಕ: 07-06-1999
2) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ:2008 ದಿನಾಂಕ: 10-9-2008 ಮತ್ತು 24-9-2008
3) ತಹಶೀಲ್ದಾರ್. ಬೆಂಗಳೂರು ದಕ್ಷಿಣ ತಾಲ್ಲೂಕು ರವರ ವರದಿ ಸಂಖ್ಯೆ: ಎಎಲ್.ಎನ್.ಎಸ್.ಆರ್. 579/2010-11 ದಿನಾಂಕ: 8/12/2010.
4) ಭೂ ಪರಿವರ್ತನಾ ಶುಲ್ಕ ರೂ. 7,10,028/- ಮತ್ತು 4663 ಚದರ ಅಡಿ ಎ.ಸಿ.ಶೀಟಿನ ಅನಧಿಕೃತ ಕಟ್ಟಡಕ್ಕೆ ದಂಡ ಶುಲ್ಕ ರೂ. 57.50 ರಂತೆ ಒಟ್ಟು 2,68,123/- ಮತ್ತು ಪೋಡಿ ಶುಲ್ಕ ರೂ.55/- ಒಟ್ಟು 9,78,206/- ರೂ.ಗಳನ್ನು, ಚಲನ್ ನಂ. 63/307 ಮತ್ತು 63/308 ದಿನಾಂಕ: 29/03/2011 ರಂದು ಎಸ್.ಬಿ.ಎಂ. ಬೆಂಗಳೂರು ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.
5) ಸಹಾಯಕ ನಿರ್ದೇಶಕರು (ಪೂರ್ವ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/ಜಿಸಿ-1381/3999/2010-11, ದಿನಾಂಕ: 10/01/2011 ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ಬೆಂಅಪ್ರಾ/(ಭೂಸ್ವಾ)/ವಿಅಭೂಸ್ವಾಅ/ಸಿ5/ಪಿಆರ್/287/2010-11, ದಿನಾಂಕ: 24/02/2011.

ಜಿಲ್ಲಾಧಿಕಾರಿಗಳ ಕಚೇರಿ ಬೆಂಗಳೂರು ಜಿಲ್ಲೆ

****

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2),95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ವಾಸದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ 1,74,240/- (ಒಂದು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಇನ್ನೂರ ನಲವತ್ತು ರೂಪಾಯಿಗಳು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ **ಸೊಸೈಟಿ ಆಫ್ ದಿ ಸರ್ವೆಂಟ್ ಆಫ್ ದಿ ಹೋಲಿ ಸ್ಪಿರಿಟ್ಸ್, ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು** ಇವರು **ಕೊತ್ತನೂರು ಗ್ರಾಮದ ಸರ್ವೆ ನಂ. 81/2ಡಿ ರಲ್ಲಿ 4-03 ಎ/ಗುಂಟೆ ವಿಸ್ತೀರ್ಣವನ್ನು ವ್ಯವಸಾಯೇತರ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ** ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1 ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ) ,ಬಿ.ಎಂ.ಐ.ಸಿ.ಎ.ಪಿ.ಎ /ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2 ಈ ಪರಿವರ್ತಿತ ಜಮೀನನ್ನು ವ್ಯವಸಾಯೇತರ **ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು, ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3 ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿಐಎಪಿಎ/ಬಿಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಐ.ಸಿ. ಎ.ಪಿ.ಎ /ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

-- 2

4 ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ ನಿವೇಶನ , ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿ.ಐ.ಎಪಿಎ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ) ಬಿ.ಎಂ.ಐ.ಸಿ.ಎ.ಪಿ.ಎ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟ ಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5 ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೊಂದಾವಣಾಧಿಕಾರಿಗಳಿಂದ/ಉಪನೋಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಪೂರಾ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6 ಸಾರ್ವಜನಿಕ ಹಿತದೃಷ್ಠಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7 **ಈ ಜಮೀನಿಗೆ ತಾಕು ಖೊಟ್ ಖರಾಬ್ ಇದ್ದಲ್ಲಿ ಕರ್ನಾಟಕ ಭೂ ಕಂದಾಯ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸಿ, ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.**

8 ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:7556–665 ಆರ್ ಮತ್ತು ಬಿ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1/7(11) 67, ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9 ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ,ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಯ ಅನುಮತಿ ಹೊಂದಿರತಕ್ಕದ್ದು.

10 ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11 ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12 ಪರಿಷ್ಕೃತ ಮಾಸ್ಟರ್ ಪ್ಲಾನ್ –2015 ರಲ್ಲಿ ಸೂಕ್ಷ್ಮ ವಲಯ (Sensitive Zone) ನಲ್ಲಿ ಬರುವ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರಿಗೆ ಭೂ ಪರಿವರ್ತನೆ ಬಗ್ಗೆ ಮಾಹಿತಿ ನೀಡುವಾಗ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು.

13 ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

14 ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು

--- 3

15 ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತಜ್ಞಾಪನ ಪಡೆದಿರುವುದು ಸ್ಪಷ್ಟಪಟ್ಟಲ್ಲಿ ತನ್‌ತಾನೆ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

16 ಪ್ರಶ್ನಿತ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ, ತಕ್ಷಣವೇ ಪಕ್ಕ ಪೋಡಿ ಮಾಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ

17 ಪ್ರಶ್ನಿತ ಜಾಗದಲ್ಲಿ ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ

**: : ಷೆಡ್ಯೂಲ್ ವಿವರ : :**

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, **ಕೊತ್ತನೂರು ಗ್ರಾಮದ ಸರ್ವೆ ನಂ. 81/2ಡಿ ರಲ್ಲಿ 4–03 ಎ/ಗುಂಟೆ (ನಾಲ್ಕು ಎಕರೆ ಮೂರು ಗುಂಟೆ ಮಾತ್ರ)** ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿಗೆ

**:: ಚಕ್ಕುಬಂದಿ ::**

| ಸರ್ವೆ ನಂ. | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|
| 81/2ಡಿ | ರಿ.ಸರ್ವೆ ನಂ. 81/2ಇ ಹಾಗೂ ಉಳಿಕೆ 81/2ಡಿ | ರಿ.ಸರ್ವೆ ನಂ. 81/2ಜಿ | ರಿ.ಸರ್ವೆ ನಂ. 82 | ಉಳಿಕೆ ಸರ್ವೆ ನಂ. 81/2ಡಿ |

**ಸಹಿ/–**
**(ಜಿ.ಎಸ್. ನಾಯಕ್)**
**ವಿಶೇಷ ಜಿಲ್ಲಾಧಿಕಾರಿಗಳು(ಕಂ)**
ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಛೇರಿ ಬೆಂಗಳೂರು

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:–**

1) ತಹಶೀಲ್ದಾರ್, ದಕ್ಷಿಣ ತಾಲ್ಲೂಕು ರವರಿಗೆ ಮೇಲ್ಕಂಡ ಅಧಿಕೃತಜ್ಞಾಪನ ಮತ್ತು ಚಲನ್ ಹಾಗೂ ಕರಾರು ಪತ್ರದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರಸ್ತೆ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ, ಕೆ.ಜಿ.ರಸ್ತೆ ,ಬೆಂಗಳೂರು
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೊಂದಣಾದಿಕಾರಿಗಳು, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು. ಬೆಂಗಳೂರು ಇವರಿಗೆ ಮಾಹಿತಿಗಾಗಿ.
6) ಅರ್ಜಿದಾರರಾದ **ಸೊಸೈಟಿ ಆಫ್ ದಿ ಸರ್ವೆಂಟ್ ಆಫ್ ದಿ ಹೋಲಿ ಸ್ಪಿರಿಟ್ಸ್, ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು** ರವರಿಗೆ ಮಾಹಿತಿಗಾಗಿ.
7) ಹೆಚ್ಚಿನ ಪ್ರತಿ

ವಿಶೇಷ ಜಿಲ್ಲಾಧಿಕಾರಿಗಳು(ಕಂ)
ಬೆಂಗಳೂರು ಜಿಲ್ಲೆ, ಬೆಂಗಳೂರು.